KAHV400006432024

# ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ

## ಹಿರೇಕೆರೂರ

ದಿನಾಂಕ: 06 ನೇ ಮಾರ್ಚ್ 2026

**ಉಪಸ್ಥಿತರುಃ–**

**ಶ್ರೀಮತಿ ಅನಿತಾ ಓ.ಎ.,** ಬಿ.ಎ., ಎಲ್.ಎಲ್.ಎಂ.,

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಹಿರೇಕೆರೂರು

**ಅಸಲು ದಾವೆ ಸಂಖ್ಯೆ 61/2024**

| | | |
|---|---|---|
| **ವಾದಿಃ–** | | ಕೆನರಾ ಬ್ಯಾಂಕ್<br>ಶಾಖಾ ವ್ಯವಸ್ಥಾಪಕರು–ಮುನಿಕಿಶೋರ್ ತಂದೆ ಚೆಂಗಯ್ಯ, ವಃ 44 ವರ್ಷ,<br>ಶಾಖೆಃ ಚಿಕ್ಕೇರೂರು, ತಾಃ ಹಿರೇಕೆರೂರು,<br>ಜಿಃ ಹಾವೇರಿ |
| | | **(ವಾದಿಯ ಪರ ವಕೀಲರು – ಶ್ರೀ ಯು.ಬಿ.ಜೋಗಿಹಳ್ಳಿ)** |
| | **ವಿರುದ್ಧ** | |
| **ಪ್ರತಿವಾದಿಯರು:–** | 1 | ಶಿವಕುಮಾರ ತಂದೆ ಮಹಾಲಿಂಗಪ್ಪ ಜಾಡರ,<br>ವ: 49 ವರ್ಷ, ಉ: ಕೃಷಿ, |
| | 2 | ಹನುಮಂತಪ್ಪ ತಂದೆ ಮಹಾಲಿಂಗಪ್ಪ ಜಾಡರ,<br>ವ: 46 ವರ್ಷ, ಉ: ಕೃಷಿ, ಇಬ್ಬರು ಸಾ:<br>ಮಲ್ಲೇನಹಳ್ಳಿ, ತಾ:ಶಿಕಾರಿಪುರ, ಜಿ: ಹಾವೇರಿ. |
| | | **(ಪ್ರತಿವಾದಿ ಪರ ವಕೀಲರು – ಶ್ರೀ ಆರ್.ಬಿ.ಕೆ)** |

| | | |
|---|---|---|
| ದಾವೆ ದಾಖಲು ಮಾಡಿದ ದಿನಾಂಕ | – | 10–06–2024 |
| ದಾವೆಯ ಸ್ವರೂಪ | – | ಹಣದ ವಸೂಲಾತಿ |
| ಸಾಕ್ಷಿ ದಾಖಲು ಮಾಡಲು ಪ್ರಾರಂಭಿಸಿದ ದಿನಾಂಕ | – | 10–12–2025 |
| ತೀರ್ಪು ಘೋಷಣೆ ಮಾಡಿದ ದಿನಾಂಕ | – | 06–03–2026 |
| ಒಟ್ಟು ಕಾಲಾವಧಿ | – | ವರ್ಷ / ತಿಂಗಳು / ದಿನ<br>–01– –08– –26– |

**(ಅನಿತಾ ಓ.ಎ),**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,

ಹಿರೇಕೆರೂರ

## ತೀರ್ಪು

ಈ ದಾವೆಯನ್ನು ವಾದಿಯ ಬ್ಯಾಂಕ್ ಪ್ರತಿವಾದಿಗಳು ವಿರುದ್ಧ ಬಾಕಿ ಸಾಲದ ಮೊತ್ತ **ರೂ. 7,74,033/–** ಗಳನ್ನು ವಾರ್ಷಿಕ **11.05%** ರ ಬಡ್ಡಿ ಸಹಿತ ವಸೂಲಾತಿ ಕೋರಿ ಸಲ್ಲಿಸಿರುತ್ತಾರೆ.

2. **ವಾದಪತ್ರದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆಃ-**

ಪ್ರತಿವಾದಿಗಳು ವಾದಿಯ ಬ್ಯಾಂಕ್ ನ್ನು ಸಂಪರ್ಕಿಸಿ, ಕಿಸಾನ ಓ.ಡಿ. ಯೋಜನೆಯಡಿಯಲ್ಲಿ ಕೃಷಿ ಬೆಳೆ ಸಾಲಕ್ಕಾಗಿ ದಿ: 03-08-2016 ರಂದು ಅರ್ಜಿ ಸಲ್ಲಿಸಿದ್ದು, ವಾದಿಯ ಬ್ಯಾಂಕ್ ಅವರ ಅರ್ಜಿಯನ್ನು ಪರಿಗಣಿಸಿ ರೂ. 3,50,000/- ಗಳನ್ನು ವಾರ್ಷಿಕ ಶೇ. 11.65 ರ ಬಡ್ಡಿ ದರದಲ್ಲಿ ಅದೇ ದಿನದಂದು ಸಾಲವನ್ನು ಮಂಜೂರು ಮಾಡಿರುತ್ತದೆ. ಸದರಿ ಸಾಲವನ್ನು ಆರ್.ಬಿ.ಐ ಕಾಲಕಾಲಕ್ಕೆ ನಿಗಧಿಪಡಿಸುವ ಬಡ್ಡಿಯ ದರಕ್ಕೆ ಮರುಪಾವತಿಸಲು ಪ್ರತಿವಾದಿಗಳು ಒಪ್ಪಿಕೊಂಡು ಮಂಜೂರಾತಿ ಪತ್ರ, ಕಿಸಾನ ಓ.ಡಿ. ಒಪ್ಪಂದ ಪತ್ರ, ಸಾಲದ ಕರಾರು ಪತ್ರ (ಹೈಪೋಥೆಕೇಶನ್ ಅಗ್ರಿಮೆಂಟ್), ಅಡಮಾನ ಪತ್ರ ಮತ್ತು ಇತರ ಅಗತ್ಯ ದಾಖಲೆಗಳಿಗೆ ಸಹಿ ಮಾಡಿರುತ್ತಾರೆ. ಸಾಲದ ಖಾತೆ ಸಂ: 0586897005871 ನ್ನು ತೆರೆದು ಅದರ ಮೂಲಕ ರೂ. 3,50,000/-ಗಳನ್ನು ಪ್ರತಿವಾದಿಗಳಿಗೆ ಜಮಾ ಮಾಡಿದ್ದು, ಪ್ರತಿವಾದಿಗಳು ಸದರಿ ಸಾಲದ ಮೊತ್ತವನ್ನು ಕೃಷಿಗಾಗಿ ವಿನಿಯೋಗಿಸಿಕೊಂಡಿರುತ್ತಾರೆ. ಸಾಲದ ಪಡೆದ ನಂತರ ಪ್ರತಿವಾದಿಗಳು ನಿಗಧಿತ ಸಮಯದಲ್ಲಿ ಸಾಲವನ್ನು ಮರು ಪಾವತಿಸುವಲ್ಲಿ ವಿಫಲವಾಗಿರುತ್ತಾರೆ. ಬಾಕಿ ಇರುವ ಸಾಲವನ್ನು ಮರುಪಾವತಿಸುವಂತೆ ಮೌಖಿಕವಾಗಿ ಹಾಗೂ ನೋಟಿಸು ಮೂಲಕ ಸಾಕಷ್ಟು ಬಾರಿ ತಿಳಿಸಿದರೂ ಪ್ರತಿವಾದಿಗಳು ಸದರಿ ಸಾಲದ ಮೊತ್ತವನ್ನು ಮರುಪಾವತಿ ಮಾಡಿರುವುದಿಲ್ಲವಾದ್ದರಿಂದ, ದಾವಾ ಕಾರಣ ಉಂಟಾಗಿರುತ್ತದೆ. ಆದ್ದರಿಂದ, ಈ ದಾವೆ.

3. ಪ್ರತಿವಾದಿಗಳು ದಾವೆಯ ಸಮನ್ಸನ್ನು ಸ್ವೀಕರಿಸಿ, ವಕೀಲರ ಮೂಲಕ ಹಾಜರಾದರೂ ಸಹ ತಮ್ಮ ಪರವಾಗಿ ಯಾವುದೇ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ.

4. ವಾದಪತ್ರದಲ್ಲಿ ಆರೋಪಿಸಿರುವ ಅಂಶಗಳನ್ನು ಸಾಭೀತುಪಡಿಸಲು, ವಾದಿಯ ಬ್ಯಾಂಕಿನ ವ್ಯವಸ್ಥಾಪಕರು ಮುಖ್ಯ ವಿಚಾರಣೆಯ ಅಂಶಗಳನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ **ಪಿ.ಡಬ್ಲೂ–1** ಎಂದು ವಿಚಾರಣೆಗೆ ಒಳಪಟ್ಟು, **8** ದಾಖಲೆಗಳನ್ನು **ನಿಪಿ–1 ರಿಂದ 8** ಎಂದು ಗುರುತಿಸಿಕೊಂಡಿರುತ್ತಾರೆ.

5. ವಾದವನ್ನು ಆಲಿಸಲಾಯಿತು, ವಾದಪತ್ರ, ಮೌಖಿಕ ಹಾಗೂ ದಾಖಲೆಗಳ ಸಾಕ್ಷಿಯನ್ನು ಅವಲೋಕಿಸಲಾಗಿ, ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುತ್ತದೆಃ–

**ಅಂಶ 1– ವಾದಿ–ಬ್ಯಾಂಕು ದಾವೆಯಲ್ಲಿ ಕೇಳಿದಂತೆ ರೂ. 7,74,033/–ನ್ನು ಶೇ.11.05ರ ಬಡ್ಡಿ ದರದಲ್ಲಿ ಪ್ರತಿವಾದಿಗಳಿಂದ ಪಡೆಯಲು ಅರ್ಹ ವಾಗಿರುತ್ತದೆಯೇ?**

**ಅಂಶ 2– ಯಾವ ಆದೇಶ ಅಥವಾ ಡಿಕ್ರಿ?**

6. ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆಃ–

**ಅಂಶ–1 – ಭಾಗಶಃ ಸಕಾರಾತ್ಮಕವಾಗಿ**

**ಅಂಶ–2 – ಅಂತಿಮ ಆದೇಶದಂತೆ, ಈ ಕೆಳಕಂಡ ಕಾರಣಗಳಿಗಾಗಿ;**

## ಕಾರಣಗಳು

**7. ಅಂಶ–1:–** ಪ್ರತಿವಾದಿಗಳು ವಾದಿಯ ಬ್ಯಾಂಕ್ ಗೆ ಅರ್ಜಿ ಸಲ್ಲಿಸಿ ಕಿಸಾನ ಓ.ಡಿ. ಯೋಜನೆಯಡಿಯಲ್ಲಿ ದಿ: 03–08–2016 ರಂದು ರೂ. 3,50,000/– ಗಳನ್ನು ವಾರ್ಷಿಕ ಶೇ.11.65 ರ ಬಡ್ಡಿ ದರದಲ್ಲಿ ಕೃಷಿ ಬೆಳೆ ಸಾಲವನ್ನು ಪಡೆದಿದ್ದು, ಆದರೆ, ಅದನ್ನು ಮರು ಪಾವತಿಸದೇ ಈ ದಾವೆ ಹೂಡುವ ಕಾಲಕ್ಕೆ ಒಟ್ಟು **7,74,033**/– ರೂ.ಗಳು ಬಾಕಿ ಇದ್ದು, ಅದನ್ನು ವಾರ್ಷಿಕ ಬಡ್ಡಿ ಶೇ. 11.05 ರಂತೆ ಮರು ಪಾವತಿಸಲು ಪ್ರತಿವಾದಿಗಳು ಹೊಣೆಗಾರರಾಗಿರುತ್ತಾರೆ ಎಂದು ತಿಳಿಸಿರುತ್ತಾರೆ.

8. ಸದರಿ ಅಂಶಗಳನ್ನು ಸಾಭೀತುಪಡಿಸುವ ಸಲುವಾಗಿ ವಾದಿಯ ಬ್ಯಾಂಕಿನ ವ್ಯವಸ್ಥಾಪಕರು ಮುಖ್ಯ ವಿಚಾರಣೆಯ ಅಂಶಗಳನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ **ಪಿ.ಡಬ್ಲೂ–1** ಎಂದು ವಿಚಾರಣೆಗೆ ಒಳಪಟ್ಟು, ತಮ್ಮ ಮುಖ್ಯ ವಿಚಾರಣೆಯ ಸಾಕ್ಷಿಯಲ್ಲಿ, ವಾದ ಪತ್ರದ ಅಂಶಗಳನ್ನೇ ಪುನಾರಾವರ್ತಿಸಿರುತ್ತಾರೆ. ಅಲ್ಲದೇ, ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ 8 ದಾಖಲೆಗಳನ್ನು **ನಿಪಿ–1 ರಿಂದ 8** ಎಂದು ಗುರುತಿಸಿಕೊಂಡಿರುತ್ತಾರೆ. ಅವೆಂದರೆ;

| **ಸಂಖ್ಯೆ** | **ದಾಖಲೆಗಳು** | **ನಿಶಾನೆಗಳು** |
|---|---|---|
| 1 | ಅಧಿಕಾರ ಪತ್ರ | ನಿ.ಪಿ–1 |
| 2 | ಸಾಲದ ಅರ್ಜಿ | ನಿ.ಪಿ–2 |
| 3 | ಮಂಜೂರಾತಿ ಪತ್ರ | ನಿ.ಪಿ–3 |
| 4 | ಸಾಲದ ಕರಾರು ಪತ್ರ | ನಿ.ಪಿ–4 |
| 5 | ಅಡಮಾನ ಪತ್ರ | ನಿ.ಪಿ–5 |
| 6 | ಎರಡು ಪುನಶ್ಚೇತನ ಪತ್ರಗಳು | ನಿ.ಪಿ–6 ಮತ್ತು 7 |
| 7 | ಬ್ಯಾಂಕ್ ಖಾತಾ ಎಕ್ಷಾಟ್ರಾಕ್ಟ್ | ನಿ.ಪಿ–8 |

9. ವಾದಿಯು ಹಾಜರು ಪಡಿಸಿದ **ನಿಪಿ–1 ರಿಂದ 8** ರ ದಾಖಲೆಗಳನ್ನು ಹಾಗೂ ಮೌಖಿಕ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಪ್ರತಿವಾದಿಗಳು **ನಿಪಿ–2** ರ ಪ್ರಕಾರ ದಿನಾಂಕ 03–08–2016 ರಂದು ವಾದಿಯ ಬ್ಯಾಂಕ್ ಗೆ ಬೆಳೆ ಸಾಲ ಕೋರಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯನ್ನು ಪರಿಗಣಿಸಿ **ನಿಪಿ–3** ರಂತೆ ರೂ. 3,50,000/–ಗಳನ್ನು ವಾರ್ಷಿಕ ಶೇಕಡ 11.65 ರ ಬಡ್ಡಿಯಂತೆ ಮಂಜೂರು ಮಾಡಿರುವುದು ಕಂಡು ಬರುತ್ತದೆ. ಸದರಿ ಸಾಲದ ಭದ್ರತೆಗಾಗಿ ಪ್ರತಿವಾದಿಗಳು **ನಿಪಿ–4** ರ ಸಾಲದ ಕರಾರು ಪತ್ರ, **ನಿಪಿ–5** ರ ಅಡಮಾನ ಪತ್ರವನ್ನು ದಿ: 22–07–2016 ಬರೆದುಕೊಟ್ಟಿದ್ದು, ಅವುಗಳಲ್ಲಿನ ಷರತ್ತುಗಳನ್ನು ಒಪ್ಪಿ ಸಹಿ ಮಾಡಿರುವುದು ಕಂಡು ಬರುತ್ತದೆ. ಸದರಿ ಸಾಲವನ್ನು ನವೀಕರಣಗೊಳಿಸಲು **ನಿಪಿ–6**

**ಮತ್ತು 7** ರ ಪುನಶ್ಚೇತನ ಪತ್ರಗಳನ್ನು (Letter of Revival)ನ್ನು ದಿ: 17-09-2018 ಮತ್ತು 15-09-2021 ರಂದು ಬರೆದುಕೊಟ್ಟಿರುತ್ತಾರೆ. ಪ್ರಸ್ತುತ ದಾವೆ ಹೂಡುವ ಕಾಲಕ್ಕೆ ಬಾಕಿ ಇರುವ ಸಾಲದ ಮೊತ್ತವನ್ನು ತೋರಿಸುವ ಸಲುವಾಗಿ **ಪಿ.ಡಬ್ಲೂ-1** ರವರು **ನಿಪಿ-8** ರ ಖಾತೆಯ ವಿವರವನ್ನು ಸಲ್ಲಿಸಿದ್ದು, ಸದರಿ ದಾಖಲೆಯು 03-08-2016 ರಿಂದ ದಿ:22-03-2024 ರವರೆಗಿನ ವಿವರವನ್ನು ಹೊಂದಿರುತ್ತದೆ. ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ಸಾಲ ಪಡೆದ ದಿನದಿಂದ ದಿ: 03-08-2016 ರಿಂದ ಈ ದಾವೆ ಹೂಡುವವರೆಗೆ ಪ್ರತಿವಾದಿಗಳು ಸಾಲದ ಕಂತನ್ನು ಕಟ್ಟಿರುವುದಿಲ್ಲ. ಅಂದಿನಿಂದ ಮೂಲ ಮೊಬಲಗು **ರೂ.3,50,000/-** ಗಳಿಗೆ ಬಡ್ಡಿಯನ್ನು ಸೇರಿ ಒಟ್ಟು **ರೂ. 7,73,033/-** ಗಳನ್ನು ಪ್ರತಿವಾದಿಗಳು ವಾದಿಯ ಬ್ಯಾಂಕಿಗೆ ತಿರುವಳಿ ಮಾಡುವುದು ಬಾಕಿ ಇರುವುದು ಕಂಡು ಬರುತ್ತದೆ.

10. ಪ್ರತಿವಾದಿಗಳು ದಾವೆಯ ಸಮನ್ಸನ್ನು ಸ್ವೀಕರಿಸಿ, ವಕೀಲರ ಮೂಲಕ ಹಾಜರಾದರೂ ಸಹ ತಮ್ಮ ಪರವಾಗಿ ಯಾವುದೇ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಹಾಗೂ ವಾದಿಯ ಬ್ಯಾಂಕಿನ ಪರ ಇರುವ ಮೌಖಿಕ ಮತ್ತು ದಾಖಲೆಗಳ ಸಾಕ್ಷಿಯನ್ನು ಪ್ರಶ್ನಿಸಿರುವುದಿಲ್ಲ. ಆದ್ದರಿಂದ, ವಾದಿಯ ಬ್ಯಾಂಕಿನ ಪರ ಇರುವ ಮೌಖಿಕ ಹಾಗೂ ದಾಖಲಾತಿ ಸಾಕ್ಷಿಯನ್ನು ನಂಬದೇ ಇರಲು ಯಾವುದೇ ಸಕಾರಣಗಳು ಇರುವುದಿಲ್ಲ. ಕಾರಣ ವಾದಪತ್ರದಲ್ಲಿ ಆರೋಪಿಸಿದಂತೆ, ಕೃಷಿ ಬೆಳೆ ಸಾಲದ ಸಲುವಾಗಿ ವಾದಿಯ ಬ್ಯಾಂಕಿನಿಂದ ರೂ. 3,50,000/- ಗಳನ್ನು ದಿನಾಂಕ 03-08-2016 ರಂದು ವಾರ್ಷಿಕ ಶೇಕಡ 11.65% ರ ಬಡ್ಡಿಯ ದರದಲ್ಲಿ ಒಪ್ಪಿ ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲದಲ್ಲಿ ಈಗ ರೂ. **7,73,033**/- ಗಳ

ಹಣ ಕೊಡುವುದು ಬಾಕಿ ಉಳಿದಿರುತ್ತದೆ ಎನ್ನುವುದನ್ನು ವಾದಿಯ ಬ್ಯಾಂಕ್ ಸಾಬೀತುಪಡಿಸಿರುತ್ತದೆ.

11. ವಾದಿಯ ಬ್ಯಾಂಕು ತನ್ನ ವಾದಪತ್ರದಲ್ಲಿ ಒಟ್ಟು ರೂ. **7,74,033/–** ಗಳನ್ನು ವಾರ್ಷಿಕ ಶೇಕಡ **11.05** ರ ಬಡ್ಡಿ ದರದಲ್ಲಿ ವಸೂಲಾತಿಗೆ ಆದೇಶಿಸಬೇಕೆಂದು ಮತ್ತು ಒಂದು ವೇಳೆ, ಸದರಿ ಮೊತ್ತವನ್ನು ಹಿಂದಿರುಗಿಸದೇ ಇದ್ದರೆ, ದಾವಾ ಆಸ್ತಿಯನ್ನು ಮಾರಾಟ ಮಾಡಲು ಪ್ರಾಥಮಿಕ ಡಿಕ್ರಿ ಮಾಡಬೇಕೆಂದು ಕೋರಿರುತ್ತಾರೆ. ಪ್ರತಿವಾದಿಗಳು ಪಡೆದುಕೊಂಡ ಸಾಲಕ್ಕೆ ಸಾಲ ಪಡೆದ ದಿನಾಂಕದಿಂದ ವಾರ್ಷಿಕ ಶೇ. 11.65 ರಂತೆ ಬಡ್ಡಿಯನ್ನು ವಿಧಿಸಿದ್ದು, ಪುನಃ ಒಟ್ಟು ಬಾಕಿ ಇರುವ ಮೂಲ ಮೊತ್ತ ಹಾಗೂ ಬಡ್ಡಿ ಹಣಕ್ಕೆ ಮತ್ತೊಮ್ಮೆ ವಾದಿ ಕೋರಿದಂತೆ ವಾರ್ಷಿಕ ಶೇ.11.05 ರಂತೆ ಬಡ್ಡಿ ವಿಧಿಸುವುದು ಕಾನೂನು ಸಮ್ಮತವಲ್ಲ. ಹಾಗೆಯೇ, ಪ್ರತಿವಾದಿಗಳು ಯಾವುದೇ ವಾಣಿಜ್ಯ ಉದ್ದೇಶಕ್ಕಾಗಿ ಸದರಿ ಸಾಲವನ್ನು ಪಡೆದುಕೊಂಡಿಲ್ಲ, ಅವರು ಬೆಳೆ ಸಾಲವಾಗಿ ಪಡೆದಿರುವುದರಿಂದ, ಬಾಕಿ ಇರುವಂತಹ ಒಟ್ಟು **7,73,033**/– ರೂ.ಗಳನ್ನು ವಾದಿಯ ಬ್ಯಾಂಕು ದಾವೆಯನ್ನು ಸಲ್ಲಿಸಿದ ದಿನಾಂಕದಿಂದ ಸಂಪೂರ್ಣ ಮೊತ್ತ ವಸೂಲಾಗುವವರೆಗೆ ವಾರ್ಷಿಕ ಶೇಕಡ 6 ರಂತೆ ಬಡ್ಡಿ ವಿಧಿಸುವುದು ಸೂಕ್ತ ಎಂದು ಈ ನ್ಯಾಯಾಲಯವು ಅಭಿಪ್ರಾಯ ಪಟ್ಟಿರುತ್ತದೆ. ಪ್ರತಿವಾದಿಗಳು ಬಾಕಿ ಇರುವ ಸದರಿ ಸಾಲದ ಹಣವನ್ನು ಸೂಕ್ತ ಸಮಯದಲ್ಲಿ ಹಿಂದಿರುಗಿಸದೇ ಇದ್ದಲ್ಲಿ, ಸದರಿ ಬಾಕಿ ಸಾಲದ ವಸೂಲಾತಿಯ ಸಲುವಾಗಿ **ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 34 ನಿಯಮ 2** ರ ಅಡಿಯಲ್ಲಿ, **ನಿಪಿ–5** ರ ಅಡಮಾನ ಪತ್ರದನ್ವಯ ದಾವಾ ಆಸ್ತಿಯನ್ನು ಕಾನೂನಿನ ಪ್ರಕ್ರಿಯೆಗೆ ಒಳಪಟ್ಟು ಮಾರಾಟ ಮಾಡಲು ಕ್ರಮ

ತೆಗೆದುಕೊಳ್ಳಬಹುದಾಗಿದೆ ಎಂದು ತೀರ್ಮಾನಿಸಿ ಅಂಶ-1 ನ್ನು **ಭಾಗಶಃ ಸಕಾರಾತ್ಮಕವಾಗಿ** ಉತ್ತರಿಸಲಾಗಿದೆ.

12. **ಅಂಶ-2:-** ಮೇಲಿನ ಅಂಶದಲ್ಲಿ ಚರ್ಚಿಸಲಾದ ಕಾರಣಗಳಿಗೆ ಈ ಕೆಳಕಂಡಂತೆ ಮಾಡಿದಃ

## ಆದೇಶ

ವಾದಿಯ ದಾವೆಯನ್ನು ಖರ್ಚು ಸಹಿತ ಭಾಗಶಃ ಡಿಕ್ರಿಗೊಳಿಸಲಾಗಿದೆ.

ಪ್ರತಿವಾದಿಗಳು ಬಾಕಿ ಇರುವ ಒಟ್ಟು **ರೂ. 7,73,033/-** ಗಳನ್ನು ವಾರ್ಷಿಕ **6%** ರ ಬಡ್ಡಿಯ ದರದಲ್ಲಿ ಈ ಆದೇಶವಾದ ದಿನಾಂಕದಿಂದ 6 ತಿಂಗಳ ಒಳಗಾಗಿ ವಾದಿ ಬ್ಯಾಂಕಿಗೆ ಹಿಂದಿರುಗಿಸಬೇಕೆಂದು ಆದೇಶಿಸಿದೆ.

ತಪ್ಪಿದ್ದಲ್ಲಿ, ವಾದಿಯ ಬ್ಯಾಂಕ್ ದಾವಾ ಆಸ್ತಿಯ ಮೇಲೆ ಯುಕ್ತ ಕಾನೂನಾತ್ಮಾಕ ಪ್ರಕ್ರಿಯೆ ಮೂಲಕ ವಸೂಲಾತಿ ಮಾಡಿಕೊಳ್ಳಲು ಆದೇಶಿಸಿದೆ.

ಮೇಲ್ಕಂಡಂತೆ ಪ್ರಾಥಮಿಕ ಡಿಕ್ರಿ ಬರೆಯತಕ್ಕದ್ದು.

(**ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ ಇಂದು ದಿನಾಂಕ 06 ನೇ ಮಾರ್ಚ್ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು**)

**(ಅನಿತಾ ಓ.ಎ)**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ಹಿರೇಕೆರೂರ.

## ಅನುಬಂಧ

### ವಾದಿಯ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿ:-

ಪಿ.ಡಬ್ಲೂ-1 - ಸಂದೀಪ ತಂದೆ ಕಾಡು ದೇಶಮುಖ.

### ವಾದಿಯ ಪರವಾಗಿ ಗುರುತಿಸಲಾದ ದಾಖಲೆಗಳು:-

ನಿಪಿ-1 - ಅಧಿಕಾರ ಪತ್ರ.

ನಿಪಿ-2 - ಸಾಲದ ಅರ್ಜಿ.

ನಿಪಿ-3 - ಮಂಜೂರಾತಿ ಪತ್ರ

ನಿಪಿ-4 - ಸಾಲದ ಕರಾರು ಪತ್ರ (ಹೈಪೋಥಿಕೇಶನ್ ಅಗ್ರಿಮೆಂಟ್)

ನಿಪಿ-5 - ಅಡಮಾನ ಪತ್ರ

ನಿಪಿ-6 ಮತ್ತು 7 - ಎರಡು ಪುನಶ್ಚೇತನ ಪತ್ರಗಳು

ನಿಪಿ–8 – ಬ್ಯಾಂಕ್ ಖಾತಾ ಎಕ್ಸಟ್ರಾಕ್ಟ.

**ಪ್ರತಿವಾದಿಗಳ ಪರ ವಿಚಾರಣೆ ಮಾಡಲಾದ ಸಾಕ್ಷಿ:–**

................................ಇಲ್ಲಾ..........................

**ಪ್ರತಿವಾದಿಗಳ ಪರ ಗುರುತಿಸಲಾದ ದಾಖಲೆಗಳು:–**

................................ಇಲ್ಲಾ..........................

ಸಹಿ/–

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**

**ಹಿರೇಕೆರೂರ.**